**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ ಸಿ. 1382/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ 27-06-2024** **ಪಿ.ಡಬ್ಲ್ಯೂ 1**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಆರ್ ಬಿ ವಕೀಲರಿಂದಃ**

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆ ಹೋಟೆಲ್ ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ಸುಮಾರು 25 ವರ್ಷಗಳಿಂದ ನನ್ನ ತಂದೆ ಹೋಟೆಲ್ ವ್ಯವಹಾರ ಮಾಡುತ್ತಾರೆ ಎಂದರೆ ಸರಿ. ಅವರೊಂದಿಗೆ ನಾನು ಸಹ ಹೊಟೇಲ್ ವ್ಯವಹಾರ ಮಾಡುತ್ತಾ ಬಂದಿದ್ದೇನೆ ಎಂದರೆ ಸರಿ. ಆರೋಪಿಯ ಗಂಡ ಸಾದಿಕ್ ಸಹ ನನಗೆ ಸುಮಾರು 20-25 ವರ್ಷಗಳಿಂದ ಪರಿಚಯ ಎಂದರೆ ಸರಿ. ನಮ್ಮ ಹೋಟೆಲ್ ಗೆ ಸದರಿ ಸಾದಿಕ್ ಆಗಾಗ ಬಂದು ಹೋಗುತ್ತಿದ್ದರಿಂದ ನಮ್ಮ ಪರಿಚಯ ಇತ್ತು ಎಂದರೆ ಸರಿ. ಸದರಿ ಸಾದಿಕ್ ಅವರ ಮಾವನವರ ಚಿಕನ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನಮ್ಮ ಹೋಟೆಲ್ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಿಂದ ರೈಲ್ವೇ ಸ್ಟೇಷನ್ ಗೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ಮುಖಾಂತರ ಸಾದಿಕ್ ಅವರ ಚಿಕನ್ ಅಂಗಡಿಗೆ ಹೋಗಿಬೇಕು ಎಂದರೆ ಸರಿ. ನನ್ನ ಮತ್ತು ಆರೋಪಿಯ ಗಂಡ ಸಾದಿಕ್ ನಡುವೆ 2021 ರ ಏಪ್ರಿಲ್ ತಿಂಗಳಲ್ಲಿ ಹಣದ ವ್ಯವಹಾರ ಪ್ರಾರಂಭವಾಯಿತು ಎಂದರೆ ಸಾಕ್ಷಿಯು ಫೆಬ್ರುವರಿ 2021 ಇರಬಹುದು ಎಂದು ನುಡಿಯುತ್ತಾರೆ. ನಾನು 2021 ರಲ್ಲಿ ಚೀಟಿ ವ್ಯವಹಾರ ಮಾಡುತ್ತಿದ್ದೆನು ಎಂದರೆ ಸರಿಯಲ್ಲ. ಅದೇ ರೀತಿ ವಾರದ ಫೈನಾನ್ಸ್ ಈಗಲೂ ಸಹ ಮಾಡುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಸಾದಿಕ್ ನಡುವಿನ ವ್ಯವಹಾರ 2021 ನೇ ಇಸ್ವಿಯಿಂದ ಪ್ರಾರಂಭವಾಗಿ 2022 ನೇ ಫೆಬ್ರುವರಿ ತಿಂಗಳಲ್ಲಿ ಮುಗಿದಿರುತ್ತದೆ ಎಂದರೆ ಸರಿಯಲ್ಲ. ಸನ್ 2021 ನೇ ಇಸ್ವಿಯಲ್ಲಿ ಸಾದಿಕ್ 50 ಸಾವಿರ ರೂ ಸಾಲ ಪಡೆದಿದ್ದರು ಎಂದರೆ ಸಾಕ್ಷಿಯು 2 ಲಕ್ಷ ಸಾಲ ಪಡೆದಿದ್ದರು ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2021 ರಲ್ಲಿ ಸಾದಿಕ್ ರವರ ಬಳಿ ಚೆಕ್ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಚೆಕ್ ನೀಡಿರುತ್ತಾರೆ ಎಂದು ನುಡಿಯುತ್ತಾರೆ. 50 ಸಾವಿರ ರೂ ಲ್ಲಿ ಬಡ್ಡಿ ಕೊಡಬೇಕಾಗುತ್ತದೆ ಎಂದು ನಾನು ಹೇಳಿದ್ದು ಆ ರೀತಿ ಅವರು ಒಪ್ಪಿದ್ದರು ಎಂದರೆ ಸರಿ. ನನ್ನ ಮೊಬೈಲ್ ನಂ. 9916177125 ಮತ್ತು 9085912818 ಇರುತ್ತದೆ. 9085912818 ನಂಬರನ್ನು ನನ್ನ ಬ್ಯಾಂಕಿನ ಖಾತೆಗೆ ಹಾಗೂ ಫೋನ್ ಪೇ, ಗೂಗಲ್ ಪೇ ಗೆ ಉಪಯೋಗ ಮಾಡುತ್ತೇನೆ ಎಂದರೆ ಸರಿ. ಸದರಿ ನಂಬರ್ ನ್ನು ಕೆನರಾ ಬ್ಯಾಂಕಿನ ಖಾತೆಗೆ ನೋಂದಾಯಿಸಲಾಗಿದೆ. 2021 ರಲ್ಲಿ ಆದ ಹಣದ ವ್ಯವಹಾರನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿ. ಸಾದಿಕ್ 2021 ರ 2 ನೇ ತಾರೀಖು ಫೆಬ್ರುವರಿ ತಿಂಗಳಲ್ಲಿ ರೂ. 1,650/- ಗಳನ್ನು ಮೊದಲನೇ ಕಂತಾಗಿ ನನಗೆ ಪಾವತಿಸಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬಹಳ ಜನ ನನಗೆ ಹಣ ಪಡೆದು ಜಿ ಪೇ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು ಹೋಟೇಲ್ ನಲ್ಲಿ ಇದ್ದಾಗ ಕೆಲವು ಜನಗಳು ಜಿ ಪೇ ಮಾಡಿ ಹಣ ಪಡೆದುಕೊಂಡು ಹೋಗುತ್ತಾರೆ ಎಂದು ನುಡಿಯುತ್ತಾರೆ. ಯಾವ ಕಾರಣಕ್ಕಾಗಿ ಈ ರೀತಿ ಮಾಡುತ್ತಾರೆ ಎಂದರೆ

ಸಾಕ್ಷಿಯು ಅವರ ಅವಶ್ಯಕತೆಗಾಗಿ ಈ ರೀತಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾದಿಕ್ 50 ಸಾವಿರ ರೂಗಳ ಸಾಲಕ್ಕೆ ದಿಃ 02.04.2021 ರಿಂದ 21.02.2022 ರವರೆಗೆ ಕಂತುಗಳಾಗಿ ಹಣವನ್ನು ಮರುಪಾವತಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ದಿಃ 21.02.2022 ರಿಂದ ಇಲ್ಲಿಯವರೆಗೆ ಸಾದಿಕ್ ನನ್ನ ಖಾತೆಗೆ ಯಾವುದೇ ಹಣ ಹಾಕಿಲ್ಲ ಎಂದರೆ ಸರಿ.

ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಅನುಮತಿಸಿ ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ